| | |
|---|---|
| ಕರು | ₹ 10,000/– |
| ಕುರಿ | ₹ 1,650/– |
| ಮೇಕೆ | ₹ 1,650/– |
| ಕೋಳಿ | ₹ 37/– |

ಆ) ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ಇವರ ವತಿಯಿಂದ ಕುರಿ ಮತ್ತು ಮೇಕೆಗಳು ಸತ್ತಲ್ಲಿ ಮಾಲೀಕರಿಗೆ ₹ 5,000/– ಗಳ ಪರಿಹಾರ ನೀಡಲಾಗುತ್ತಿದೆ. ಇದೇ ರೀತಿ ಎತ್ತು, ಎಮ್ಮೆ, ಆಕಳು ಮೊದಲಾದವುಗಳು ಸತ್ತರೆ ಪರಿಹಾರ ನೀಡುವ ಯೋಜನೆ ಇರುವುದಿಲ್ಲ.

ಇ) 2014–15 ನೇ ಸಾಲಿನಲ್ಲಿ ನಿಪ್ಪಾಣಿ ವಿಧಾನ ಸಭಾ ಮತ ಕ್ಷೇತ್ರದಲ್ಲಿ ನೈಸರ್ಗಿಕ ವಿಕೋಪದಿಂದ ಯಾವುದೇ ಪ್ರಾಣಿಗಳು ಬಲಿ ಆಗಿರುವುದಿಲ್ಲ.

**ದೇವಸ್ಥಾನಗಳಿಗೆ ಅನುದಾನ ಮಂಜೂರು ಮಾಡುವುದು**

**1168 (398); ಶ್ರೀ ಕೋಳಿವಾಡ ಕೆ.ಬಿ.**

ಅ) ರಾಜ್ಯದ ಎಷ್ಟು ದೇವಸ್ಥಾನಗಳಿಗೆ ಅನುದಾನ ಬಿಡುಗಡೆಯಾಗಿದೆ (ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಹಾವೇರಿ ಜಿಲ್ಲೆಯಲ್ಲಿರುವ ದೇವಸ್ಥಾನಗಳಿಗೆ ಬಿಡುಗಡೆಯಾದ ಅನುದಾನವೆಷ್ಟು (ವಿವರ ನೀಡುವುದು)?

**ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನಾ ಮತ್ತು ಮುಜರಾಯಿ ಸಚಿವರು)**

ಅ) ರಾಜ್ಯದ ಧಾರ್ಮಿಕ ಸಂಸ್ಥೆಗಳ ದುರಸ್ತಿ, ಜೀರ್ಣೋದ್ಧಾರ, ಅಭಿವೃದ್ಧಿ ಕಾರ್ಯಗಳಿಗಾಗಿ ಈ ಕೆಳಕಂಡ ಯೋಜನೆಗಳಲ್ಲಿ ಒಟ್ಟು ₹ 7850.38

ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಜಿಲ್ಲಾವಾರು ವಿವರ ಅನುಬಂಧದಲ್ಲಿ ಒದಗಿಸಿದೆ.

| ಕ್ರ. ಸಂ | ಯೋಜನೆ | ಬಿಡುಗಡೆಯಾದ ಮೊತ್ತ (₹ ಲಕ್ಷಗಳಲ್ಲಿ) |
|---|---|---|
| 1. | ದುರಸ್ಥಿ, ಜೀರ್ಣೋದ್ಧಾರ, ಅಭಿವೃದ್ಧಿ | 5250.38 |
| 2. | ಆರಾಧನೆ ಯೋಜನೆ | 1973.40 |
| 3. | ಪರಿಶಿಷ್ಟ ಜಾತಿ ಉಪ ಯೋಜನೆ | 445.90 |
| 4. | ಗಿರಿಜನ ಉಪಯೋಜನೆ | 180.70 |
| | ಒಟ್ಟು | **7850.38** |

ಆ) ಹಾವೇರಿ ಜಿಲ್ಲೆಯ ದೇವಸ್ಥಾನಗಳಿಗೆ ಒಟ್ಟು ₹ 192.60ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ.

| ಕ್ರ. ಸಂ | ಯೋಜನೆ | ಬಿಡುಗಡೆಯಾದ ಮೊತ್ತ (₹ ಲಕ್ಷಗಳಲ್ಲಿ) |
|---|---|---|
| 1. | ದುರಸ್ಥಿ, ಜೀರ್ಣೋದ್ಧಾರ, ಅಭಿವೃದ್ಧಿ | 123.00 |
| 2. | ಆರಾಧನಾ, ಪರಿಶಿಷ್ಟ ಜಾತಿ ಉಪಯೋಜನೆ, ಗಿರಿಜನ ಉಪಯೋಜನೆ | 69.60 |
| | ಒಟ್ಟು | **192.60** |